# IN THE COURT OF THE ADDL. SENIOR CIVIL JUDGE & JMFC., GUBBI
# OS – **308/2023**

Witness present and duly sworn on : 24.07.2025.

<u>Further cross Examination: by Counsel for Defendants :</u>

ನನ್ನ ಮಾವ ಟಿ. ಗೋವಿಂದಯ್ಯನವರಿಗೆ ಜಯಮ್ಮ ಎಂಬ ಮಗಳು ಇದ್ದಳು ಎಂದರೆ ಸರಿ. ನನ್ನ ಗಂಡ, ನಾನು ಹಾಗೂ ನನ್ನ ಮಕ್ಕಳು ಮಾರಾಟ ಮಾಡಿರುವ ದಾಖಲೆಗೆ ಸದರಿ ಜಯಮ್ಮ ಸಹಿ ಮಾಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಜಯಮ್ಮ ಹಕ್ಕು ಖುಲಾಸೆ ದಾಖಲೆ ಮಾಡಿಕೊಟ್ಟಿದ್ದಾರೆ. ದಿನಾಂಕಃ 09.11.2023 ರ ಪೂರ್ವದಲ್ಲಿ ನಾನು ಮತ್ತು ನನ್ನ ಗಂಡ ಹಾಗೂ ಮಕ್ಕಳು ಸಾಕಷ್ಟು ಆಸ್ತಿಗಳನ್ನು ಮಾರಾಟ ಮಾಡಿದ್ದೇವೆ ಎಂದರೆ ಕೆಲವೊಂದು ಮಾರಾಟ ಮಾಡಿದ್ದೇವೆ. ಸಾಕ್ಷಿ ಮುಂದುವರೆದು ಅವುಗಳಲ್ಲಿ ಜಯಮ್ಮ ಸಹಿ ಮಾಡಿಲ್ಲ. ದಿನಾಂಕಃ 09.11.2023 ರಂದು ಜಯಮ್ಮ ರವರು ಹಕ್ಕು ಖುಲಾಸೆ ಪತ್ರ ಮಾಡಿಕೊಟ್ಟಿಲ್ಲ ಹಾಗೂ ಅಂತಹ ದಾಖಲೆಯನ್ನು ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿಯಲ್ಲಿ ಈಗಲೂ ಸಹ ರಾಗಿ ಮತ್ತು ಹುರುಳಿ ಬೆಳೆ ಬೆಳೆಯುತ್ತಿದ್ದಾರೆಂದರೆ ಸರಿ. ಸದರಿ ಜಮೀನಿನಲ್ಲಿ ಪ್ರತಿವಾದಿಯ ಮಳೆಯಾಶ್ರಿತ ಸದರಿ ಬೆಳೆಗಳನ್ನು ಬೆಳೆಯುತ್ತಿದ್ದಾರೆಂದರೆ ನಾವು ಬೆಳೆಯುತ್ತಿದ್ದೇವೆ. ನನ್ನ ಮಾವ ಖರೀದಿಯ ದಿನದಿಂದಲೂ ಈಗಲೂ ಸಹ ಹಾಗೇಯೇ ಇದೆ ಎಂದರೆ ಸರಿ. ಸದರಿ ಜಮೀನನ್ನು ಬಹಳಷ್ಟು ಹಣ ಖರ್ಚು ಮಾಡಿ ಅಭಿವೃದ್ಧಿ ಪಡಿಸಿದ್ದೇವೆ ಎಂದು ಸುಳ್ಳು ಹೇಳಿದ್ದೇನೆಂದರೆ ಸರಿಯಲ್ಲ. ದಾವಾ ಸರ್ವೆ ನಂಬರ್ ಒಟ್ಟು ವಿಸ್ತೀರ್ಣ 1 ಎಕರೆ 1 ಗುಂಟೆ ಇರುತ್ತದೆ. ದಾವಾ ಸರ್ವೆ ನಂ.205/1 ರಲ್ಲಿ

ಬೇರೆ ಯಾರು ಮಾಲೀಖರಿದ್ದಾರೆಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಬೇರೆಯಾರು ಇರುವುದಿಲ್ಲ.

ನನ್ನ ಮಾವ ಪ್ರತಿವಾದಿಗೆ ಬರೆದುಕೊಟ್ಟಿರುವ ಮರಣ ಶಾಸನದ ಆಸ್ತಿಯಲ್ಲಿ ಒಂದುವರೆಗುಂಟೆ ಜಮೀನು ಹೇಮಾವತಿ ನಾಲೆಗೆ ವಶಪಡಿಸಿಕೊಂಡಿದ್ದಾರೆಂದರೆ ಸರಿ. 2016 ರಲ್ಲಿ ಸದರಿ ಭೂ ಸ್ವಾಧೀನ ಆಗಿದ್ದು, ಅದರಂತೆ ನೋಟಿಸ್ ಕೊಟ್ಟಿರುವ ವಿಚಾರ ನನಗೆ ಗೊತ್ತಿತ್ತು. ಸದರಿ ಸಮಯದಲ್ಲಿ ನನ್ನ ಗಂಡ ಜೀವಂತ ಇದ್ದರು. ಸಾಕ್ಷಿ ಮುಂದುವರೆದು ನನ್ನ ಗಂಡ ದಾವಾ ಆಸ್ತಿಯನ್ನು ನೋಡಿಕೊಳ್ಳುತ್ತಿದ್ದರು. ಭೂ ಸ್ವಾಧೀನ ಅವಾರ್ಡ ನೋಟಿಸ್ ಖಾತೆ ಪಹಣಿ ಬದಲಾವಣೆ ಆಗದೆ ಇದ್ದ ಕಾರಣ ನನ್ನ ಮಾವ ಟಿ. ಗೋವಿಂದಯ್ಯ ರವರ ಹೆಸರಿಗೆ ಬಂದಿತ್ತು ಎಂದರೆ ಸರಿ. ಈಗಲೂ ಸಹ ಭೂ ಪರಿಹಾರದ ಹಣವನ್ನು ನಾವು ಪಡೆದಿಲ್ಲ ಎಂದರೆ ಸರಿ. ಸದರಿ ಸಮಯದಲ್ಲಿ ನನ್ನ ಗಂಡ ಆಸ್ತಿಯು ಪ್ರತಿವಾದಿಗೆ ಸೇರಿರುವುದು ಎಂದು ನನಗೆ ತಿಳಿಸಿದ್ದರು ಎಂದರೆ ಸರಿಯಲ್ಲ. 2008 ರಲ್ಲಿ ಪ್ರತಿವಾದಿಯು 11-E ನಕಾಶೆ ಮಾಡಿಸಲು ಅರ್ಜಿ ಸಲ್ಲಿಸಿದ್ದರು ಎಂದರೆ ತಹಶೀಲ್ದಾರ್ ಕಛೇರಿಯಲ್ಲಿ ತೀರಸ್ಕರಿಸಿದ್ದರು. ಪ್ರತಿವಾದಿಯು 11-E ನಕಾಶೆ ಮಾಡಿಸಿರುವ ವಿಚಾರ ನನ್ನ ಗಂಡ ಹಾಗೂ ನನಗೆ ಗೊತ್ತಿತ್ತು ಎಂದರೆ ಸರಿ.

2008 ರಲ್ಲಿ ನಾವು ಪೌತಿ ಖಾತೆ ಬದಲಾವಣೆಗೆ ಕೊಟ್ಟಿದ್ದ ಅರ್ಜಿಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ. ನನ್ನ ಗಂಡನ ಜೀವಿತ ಕಾಲದಲ್ಲಿ ನನ್ನ ಮಾವ ಮರಣ ಶಾಸನ ಮಾಡಿಕೊಟ್ಟಿದ್ದ ಆಸ್ತಿಗೆ ಖಾತೆ ಪಹಣಿ ಬದಲಾವಣೆ ಮಾಡಿಕೊಡಲು ನಾವು ಅರ್ಜಿ ಕೊಟ್ಟರಲಿಲ್ಲ ಎಂದರೆ ಸರಿ. ಮರಣ ಶಾಸನದ ಆಸ್ತಿಯು ಒಟ್ಟು ಕುಟುಂಬದ ಆದಾಯದಿಂದ ಖರೀದಿ ಮಾಡಿರುವುದು ತೋರಿಸಲು ನಾನು ದಾಖಲೆಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ. ನನ್ನ ಮಾವ ಅವರ ಸ್ವ ಇಚ್ಛೆಯಿಂದ ದಿನಾಂಕಃ 17.01.2004 ರಂದು ದಾವಾ ಆಸ್ತಿಯನ್ನು ಪ್ರತಿವಾದಿಗೆ ಮರಣ ಶಾಸನದ ಮೂಲಕ ಕೊಟ್ಟಿದ್ದಾರೆಂದರೆ ನನಗೆ ಗೊತ್ತಿಲ್ಲ. ಮರಣ ಶಾಸನ ಬರೆಯಲು ಅವರಿಗೆ ಹಕ್ಕು ಇತ್ತು ಎಂದರೆ ಸರಿಯಲ್ಲ. ನನ್ನ ಮಾವ ಮರಣ ಶಾಸನ ಬರೆದುಕೊಟ್ಟಿರುವ ವಿಚಾರ ಗೊತ್ತಿದ್ದರು ಸಹ ನನ್ನ ಗಂಡ ಮರಣ

ಹೊಂದಿದ ನಂತರ ದಾವಾ ಆಸ್ತಿಯನ್ನು ಕಬಳಿಸಲು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಈಗಲೂ ಸಹ ಪ್ರತಿವಾದಿಯೇ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

**Re examination - Nil**

(Typed to my dictation in open court)

R.O.I & A.C.

Addl. Senior Civil Judge and
JMFC., Gubbi